# ಇಎಮ್‌ಐ ಆಫರ್‌ಗಳು, ಬ್ಯಾಲನ್ಸ್ ಟ್ರಾನ್ಸ್‌ಫರ್‌ಗಳು ಮತ್ತು ಕಾರ್ಡ್‌ನ ಮೇಲಿನ ಸಾಲದ ಕುರಿತು ನಿಯಮ ಮತ್ತು ನಿಬಂಧನೆಗಳು

1. ಸೌಲಭ್ಯವನ್ನು ಇಶ್ಯೂ ಮಾಡುವ ಸಮಯದಲ್ಲಿ ಹಣದ ಮೊತ್ತ, ಬಡ್ಡಿ ದರ, ಸಾಲದ ಅವಧಿ, ಪ್ರೊಸೆಸಿಂಗ್ (ಸಂಸ್ಕರಣೆ) ಶುಲ್ಕ ಮತ್ತು ಪ್ರಿ-ಕ್ಲೋಶರ್ ಚಾರ್ಜ್‌ಗಳನ್ನು ನಿಮಗೆ ತಿಳಿಸಲಾಗುವುದು.

2. ಕ್ರೆಡಿಟ್ ಕಾರ್ಡ್‌ನ್ನು ಉಪಯೋಗಿಸಿ ಮಾಡಲಾಗುವ ಯಾವುದೇ ಬ್ಯಾಲನ್ಸ್ ಟ್ರಾನ್ಸ್‌ಫರ್ ಆಫರ್ ಅಥವಾ ಸಾಲಕ್ಕೆ ಇಎಮ್‌ಐ ಸೌಲಭ್ಯ ಇರಬಹುದು ಅಥವಾ ಇಲ್ಲದಿರಬಹುದು.

3. ಈ ಸೌಲಭ್ಯಗಳಿಗಾಗಿ ಪ್ರತ್ಯೇಕವಾದ ಸಾಲದ ಖಾತೆಯೊಂದನ್ನು ತೆರೆಯಲಾಗುವುದು. ಖಾತೆಯ ನಂಬರ್ ನಿಮ್ಮ ಕಾರ್ಡ್ ಸ್ಟೇಟ್‌ಮೆಂಟ್‌ನಲ್ಲಿ ಇರುತ್ತದೆ ಹಾಗೂ ನಿಮ್ಮ ಪ್ರತಿಯೊಂದು ಖಾತೆಗಳ ಪಾವತಿಯನ್ನೂ ಒಂದೊಂದಾಗಿ ಮಾಡುವಂತೆ ನಾವು ವಿನಂತಿಸುತ್ತೇವೆ. ಒಂದೇ ಚೆಕ್/ಡಿಡಿಯ ಮೂಲಕ ನೀವು ಬೇರೆ ಬೇರೆ ಕಾರ್ಡ್ ಅಕೌಂಟ್‌ಗಳಿಗೆ ಪಾವತಿ ಮಾಡಲು ಬಯಸಿದಲ್ಲಿ, ಈ ಪಾವತಿಯನ್ನು ನೀವು ನಿಮ್ಮ ಯಾವುದೇ ಒಂದು ಖಾತೆ ನಂಬರಿಗೆ ಡ್ರಾ ಮಾಡಬಹುದು. ಆಗ ಚೆಕ್/ಡಿಡಿಯ ಹಿಂಬದಿಯಲ್ಲಿ ಪಾವತಿಯನ್ನು ಹೇಗೆ ಎಲೊಕೇಟ್ ಮಾಡಬೇಕೆನ್ನುವ ಸ್ಪಷ್ಟ ನಿರ್ದೇಶನ ಕೊಡಬೇಕು.

4. ಖಚಿತವಾಗಿ ನಿರ್ದಿಷ್ಟಗೊಳಿಸದಿದ್ದಲ್ಲಿ, ನಿಮ್ಮ ಕ್ರೆಡಿಟ್ ಕಾರ್ಡ್‌ನ ಮೇಲೆ ಮಂಜೂರು ಮಾಡಲ್ಪಟ್ಟ ಯಾವುದೇ ಸಾಲದ ಮೊತ್ತವು ನಿಮ್ಮ ಕ್ರೆಡಿಟ್ ಕಾರ್ಡ್ ಲಿಮಿಟ್‌ನ ಭಾಗವಾಗಿರುತ್ತದೆ. ಇಂತಹ ಸಂದರ್ಭದಲ್ಲಿ, ಕ್ರೆಡಿಟ್ ಕಾರ್ಡ್‌ನ ಮೇಲೆ ತೆಗೆದ ಸಾಲದ ಬಾಕಿ ಇರುವ ಅಸಲು ಹಣದ ತನಕ ನಿಮ್ಮ ಕ್ರೆಡಿಟ್ ಕಾರ್ಡ್ ಲಿಮಿಟ್ ಬ್ಲಾಕ್ (ತಡೆ ಹಿಡಿ) ಮಾಡಲ್ಪಡುತ್ತದೆ. ಅನ್ವಯಗೊಳ್ಳುವ ಇಎಮ್‌ಐ/ಮೊತ್ತವನ್ನು ನೀವು ಯಾವಾಗ ಮರುಪಾವತಿ ಮಾಡುತ್ತೀರೊ, ಆಗ ಲಭ್ಯವಿರುವ ಕ್ರೆಡಿಟ್ ಲಿಮಿಟ್, ತೀರಿಸಿದ ಅಸಲು ಹಣದಷ್ಟು ಹೆಚ್ಚಾಗುತ್ತದೆ.

5. ನಿಮ್ಮ ಮಂತ್ಲಿ ಸ್ಟೇಟ್‌ಮೆಂಟ್‌ನಲ್ಲಿ ಕಾಣಿಸಲಾಗುವ 'ಎವೇಲೇಬಲ್ ಕ್ರೆಡಿಟ್ ಲಿಮಿಟ್' ನಿಮ್ಮ ಇಎಮ್‌ಐ ಲೋನ್ ಅಮೌಂಟ್ಸ್ (ಸಾಲದ ಮೊತ್ತಗಳು)ನ ಎಲ್ಲ ಬಾಕಿ ಇರುವ ಮೊತ್ತಕ್ಕೆ ಸಂಬಂಧಿಸಿದ ಎಲ್ಲ ಬ್ಯಾಲನ್ಸ್ ಟ್ರಾನ್ಸ್‌ಫರ್‌ಗಳು, ಎಡ್ವಾನ್ಸ್(ಮುಂಗಡ)ಗಳು ಹಾಗೂ ಇತರ ಯಾವುದೇ ಪಾವತಿಸಿದ ಅಸಲು ಮೊತ್ತಕ್ಕೆ ಸೂಚಿಯಾಗಿರುತ್ತದೆ.

6. ಇಎಮ್‌ಐ ಅಕೌಂಟಿಗಾಗಿ, ದಯವಿಟ್ಟು ಕೆಳಗಿರುವ ಸ್ಟೇಟ್‌ಮೆಂಟ್‌ನ ಪ್ರತಿಯನ್ನು ನೋಡಿ. ಇದರಿಂದ ನೀವು ನಮ್ಮ ಇಎಮ್‌ಐ ಅಕೌಂಟ್‌ನ ಬಿಲ್ಲಿಂಗ್ ಸಿಸ್ಟಮ್ ಹೇಗಿದೆ ಎಂದು ತಿಳಿದುಕೊಳ್ಳಬಹುದು.



7. ಪಾವತಿಸುವ ಡ್ಯೂ ದಿನಾಂಕದೊಳಗೆ ಕನಿಷ್ಠ ಮೊತ್ತವನ್ನು ಪೂರ್ತಿಯಾಗಿ ಪಾವತಿಸದಿದ್ದಲ್ಲಿ ಪ್ರತಿ ತಿಂಗಳೂ ಡ್ಯೂ ಆಗುವ ಕನಿಷ್ಠ ಮೊತ್ತಕ್ಕೆ ಇಎಮ್‌ಐಯನ್ನು ಸೇರಿಸಿ ಇದಕ್ಕೆ ಜುಲ್ಮಾನೆಯ ಚಾರ್ಜ್ ವಿಧಿಸಲಾಗುವುದು. ಇಎಮ್‌ಐ ಹಾಗೂ ಇದರಿಂದ ಡ್ಯೂ ಆಗುವ ಕನಿಷ್ಠ ಮೊತ್ತವು ನಿಮ್ಮ ಕ್ರೆಡಿಟ್ ಕಾರ್ಡ್ ಲಿಮಿಟ್‌ನ ಭಾಗವಾಗುತ್ತದೆ. ಬಾಕಿ ಇರುವ ಹಣ (ಇಎಮ್‌ಐ ಒಳಗೊಂಡಂತೆ), ಕ್ರೆಡಿಟ್ ಲಿಮಿಟನ್ನು ಮೀರಿದಲ್ಲಿ, ಅನ್ವಯವಾಗುವ ಓವರ್ ಲಿಮಿಟ್ ಚಾರ್ಜ್‌ಗಳನ್ನು ಭರಿಸುವ ಹೊಣೆ ನಿಮ್ಮದಾಗುತ್ತದೆ.

8. ಈ ಪ್ರಮೋಶನ್ ಆಫರ್‌ಗಳನ್ನು ಕಾರ್ಡ್ ಮೆಂಬರ್‌ಗಳನ್ನು ಆಯ್ಕೆ ಮಾಡಲು ಮಾತ್ರ ಕೈಗೊಳ್ಳಲಾಗುತ್ತದೆ. ಕಾರ್ಡ್ ಮೆಂಬರ್‌ಗಳನ್ನು ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ (''ದ ಬ್ಯಾಂಕ್'')ನ ಏಕೈಕ ನಿರ್ಣಯದ ಅನುಸಾರ ಆಯ್ಕೆ ಮಾಡಲಾಗುತ್ತದೆ. ತನ್ನ ನಿರ್ಣಯದ ಮೇರೆಗೆ ಮುಂದಿನ ದಿನಗಳಲ್ಲಿ ಇಂತಹ ಆಫರ್‌ಗಳನ್ನು ಬ್ಯಾಂಕ್ ಮಾಡಲೂ ಬಹುದು, ಮಾಡದಿರಲೂ ಬಹುದು.

9. ನಿಮ್ಮ ಮಾಸಿಕ ಕ್ರೆಡಿಟ್ ಕಾರ್ಡ್ ಸ್ಟೇಟ್‌ಮೆಂಟ್‌ನಲ್ಲಿ ಸಾಲದ ಮೊತ್ತ, ಅನ್ವಯವಾಗುವ ಬಡ್ಡಿ ಪ್ರೊಸೆಸಿಂಗ್ ಶುಲ್ಕ ಮತ್ತು ಸೇವಾ ಕರ (ಇಎಮ್‌ಐ ಯ ಬಡ್ಡಿಯ ಭಾಗದ ಮೇಲೆ) ಗಳನ್ನು ಬಿಲ್ ಮಾಡಲಾಗುವುದು.

10. ಯಾವುದೇ ಸಮಯದಲ್ಲಿ ಎಲ್ಲ ಅಥವಾ ಯಾವುದೇ ನಿಯಮ ನಿಬಂಧನೆಗಳನ್ನು ಸೇರಿಸುವ, ಬದಲಿಸುವ ಸ್ವಲ್ಪ ಪರಿವರ್ತಿಸುವ ಪೂರ್ತಿ ಬದಲಾಯಿಸುವ ಅಥವಾ ಭಿನ್ನಗೊಳಿಸುವ ಹಕ್ಕನ್ನು ಬ್ಯಾಂಕ್ ಕಾದಿರಿಸಿಕೊಂಡಿದೆ ಅಥವಾ ಇನ್ನೊಂದು ಸ್ಕೀಮ್‌ನ ಮೂಲಕ ಪೂರ್ತಿಯಾಗಿ ಅಥವಾ ಆಂಶಿಕವಾಗಿ ಈ ಸ್ಕೀಮನ್ನು ಬದಲಾಯಿಸಬಹುದು, ಅಂತಹ ಸ್ಕೀಮ್ ಇದರಂತೆಯೇ ಇರಬಹುದು ಅಥವಾ ಇಲ್ಲದಿರಬಹುದು, ಅಥವಾ ಇಡೀ ಸ್ಕೀಮನ್ನು ಪೂರ್ತಿಯಾಗಿ ಬ್ಯಾಂಕ್ ಹಿಂತೆಗೆದುಕೊಳ್ಳಬಹುದು.

11. ಕಾರ್ಡ್‌ನ್ನು ರದ್ದು ಗೊಳಿಸಿದ ಪಕ್ಷದಲ್ಲಿ ಹಾಗೂ ಹಿಂದಿನ ಬಾಕಿ ಸಲ್ಲಿಸದೆ ಓವರ್ ಡ್ಯೂ ಆಗಿದ್ದಲ್ಲಿ ಸಾಲವನ್ನು ಕೂಡಲೇ ಮುಗಿತಾಯಗೊಳಿಸಿ ಬಾಕಿ ಉಳಿದಿರುವ ಸಂಪೂರ್ಣ ಮೊತ್ತವನ್ನು ಡೆಬಿಟ್ ಮಾಡುವ ಹಕ್ಕನ್ನು ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಕಾದಿರಿಸಿಕೊಂಡಿದೆ.

12. ಈ ಸ್ಕೀಮ್‌ನಿಂದಾಗಿ ಪಾರ್ಟಿಸಿಪೆಂಟ್ (ಭಾಗವಹಿಸುವವರು) ಅನುಭವಿಸಲಾಗುವ, ಹೊಂದುವ ಭರಿಸುವ ಯಾವುದೇ ಆ್ಯಕ್ಷನ್‌ಗಳು (ಪ್ರಕ್ರಿಯೆಗಳು) ಕ್ಲೇಮ್‌ಗಳು, ಡಿಮಾಂಡ್‌ಗಳು (ಬೇಡಿಕೆಗಳು), ನಷ್ಟಗಳು, ಹಾನಿಗಳು, ಖರ್ಚುವೆಚ್ಚಗಳು ಮತ್ತು ಚಾರ್ಜ್‌ಗಳಿಗೆ ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕನ್ನು ಹೊಣೆಯಾಗಿ ಅಥವಾ ಜವಾಬ್ದಾರನಾಗಿ ಪಾರ್ಟಿಸಿಪೆಂಟ್ ಮಾಡುವಂತಿಲ್ಲ.

13. ಎಲ್ಲ ಕಂತುಗಳೂ ಚಾರ್ಜ್ ಆಗುವ ಮೊದಲೇ ನಿಮ್ಮ ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಕ್ಲೋಸ್ ಗೊಳಿಸಲ್ಪಟ್ಟಲ್ಲಿ ಅಥವಾ ನಿಮ್ಮ ಇಎಮ್‌ಐ ಅಕೌಂಟ್ ಪ್ರಿ-ಕ್ಲೋಸ್ ಮಾಡಲ್ಪಟ್ಟಲ್ಲಿ ಬಾಕಿ ಉಳಿದ ಸಾಲದ ಮೊತ್ತ, ಜೊತೆಗೆ ಪ್ರಿ-ಕ್ಲೋಶರ್ ಚಾರ್ಜ್‌ಗಳು, ನಿಮ್ಮ ಕ್ರೆಡಿಟ್ ಕಾರ್ಡ್‌ಗೆ ಒಂದು ಜುಮ್ಲಾ ಮೊತ್ತವಾಗಿ ಡೆಬಿಟ್ ಮಾಡಲ್ಪಡುತ್ತದೆ. ಆಬಳಿಕ ಆಂಶಿಕ /ಪಾವತಿಯೇ ಇಲ್ಲವಾದಲ್ಲಿ ನಿಮ್ಮ ಕಾರ್ಡ್ ಅಕೌಂಟ್‌ನಲ್ಲಿ ಇದು ಬಾಕಿ ಎಂದು ಪರಿಗಣಿಸಲ್ಪಡುತ್ತದೆ, ಹಾಗೂ ಫೈನಾನ್ಶಿಯಲ್ ಚಾರ್ಜ್‌ಗಳು ಇದಕ್ಕೆ ಅನ್ವಯಿಸಲ್ಪಡುತ್ತವೆ (ಕ್ರೆಡಿಟ್ ಕಾರ್ಡ್‌ನ ಆಡಳಿತ ಮಾಡುವ ಟಿ ಆ್ಯಂಡ್ ಸಿಯ ಅನುಸಾರ)

14. ಇಲ್ಲಿ ಒಳಗೊಂಡ ಯಾವುದೂ ಸಹ, ಕಾರ್ಡ್‌ಮೆಂಬರ್ ಎಗ್ರಿಮೆಂಟ್ (ಒಪ್ಪಂದ)ನ ನಿಯಮ ಮತ್ತು ನಿಬಂಧನೆಗಳಿಗೆ ಅನ್ಯಾಯ ಒದಗಿಸುವುದಿಲ್ಲ ಅಥವಾ ಅವುಗಳ ಮೇಲೆ ಪರಿಣಾಮ ಬೀರುವುದಿಲ್ಲ. ಈ ಕರಾರಿನ ನಿಬಂಧನೆಗಳು, ಬ್ಯಾಂಕಿನ ಕಾರ್ಡ್ ಮೆಂಬರರ ನಿಯಮ ಮತ್ತು ನಿಬಂಧನೆಗೆ ಹೆಚ್ಚುವರಿಯಾಗಿದೆ ಹಾಗೂ ಅದಕ್ಕೆ ಹೀನಾಯವಾಗಿರುವುದಿಲ್ಲ.

15. ಸಾಲ, ಬಡ್ಡಿ ದರ, ಅನ್ವಯವಾಗುವ ಚಾರ್ಜ್‌ಗಳು ಅಥವಾ ನಿಯಮ ಮತ್ತು ನಿಬಂಧನೆಗಳ ವಿವರಗಳ ಕುರಿತು ನಿಮಗೆ ಒಪ್ಪಿಗೆ ಇಲ್ಲದಿದ್ದಲ್ಲಿ, ಬ್ಯಾಂಕಿನ ಹೆಲ್ಪ್‌ಲೈನಿಗೆ ನೀವು ಕರೆ ಮಾಡಿ, 15 ದಿನಗಳ ಒಳಗೆ ಸಾಲವನ್ನು ನೀವು ರದ್ದುಗೊಳಿಸಬೇಕು. ಇದಕ್ಕೆ ತಪ್ಪಿದಲ್ಲಿ ನೀವು ಸಾಲವನ್ನು ಪಡೆದುಕೊಳ್ಳಲು ಹಾಗೂ ಇಲ್ಲಿನ ನಿಯಮ ಮತ್ತು ನಿಬಂಧನೆಗಳನ್ನು ಒಪ್ಪುವುದಕ್ಕೆ ನೀವು ಸಮ್ಮತಿಸುತ್ತೀರಿ ಎಂದು ತಿಳಿಯಲಾಗುತ್ತದೆ ಮತ್ತು ಡಿಮಾಂಡ್ ಡ್ರಾಫ್ಟ್ ಸಿಕ್ಕಿದಂದಿನಿಂದ ಬಡ್ಡಿ ನೀಡುವ ಹೊಣೆ ವಹಿಸುತ್ತೀರಿ ಎಂದು ತಿಳಿಯಲಾಗುತ್ತದೆ.

16. ಆ ಬಳಿಕ ವಾಲಂಟರಿ (ಸ್ವ ಇಚ್ಛೆಯಂತೆ) ಕ್ಯಾನ್ಸಲೇಶನ್ ಮಾಡುವಂತಿಲ್ಲ.

17. ನಿಮ್ಮ ಇಎಮ್‌ಐ ಅಕೌಂಟ್ ಪ್ರಿ-ಕ್ಲೋಸ್ ಮಾಡಬೇಕಾದಲ್ಲಿ ದಯವಿಟ್ಟು ಹೆಲ್ಪ್‌ಲೈನ್ ನಂಬರ್‌ಗಳನ್ನು ಸಂಪರ್ಕಿಸಿ.